**ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು**

ವಿಷಯ:- ಶ್ರೀ ಎಂ.ಡಿ.ಅಶೋಕ್, ಆಯ್ಕೆ ಶ್ರೇಣಿ ಉಪನ್ಯಾಸಕರು ಅನುದಾನಿತ ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ ಇವರಿಗೆ ಪರಿಷ್ಕೃತ 07 ನೇ ಎಐಸಿಟಿಇ ವೇತನ ವ್ಯತ್ಯಾಸದ ಮೊತ್ತವನ್ನು ಬಿಡುಗಡೆಗೊಳಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಟಿಪಿಇ 2019(ಭಾಗ) ದಿನಾಂಕ:22.04.2020.

2. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿಂದನಾ ಅರ್ಜಿ ಸಂಖ್ಯೆ: 100096/2024.

3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 12 ಟಿಪಿಇ 2019(ಭಾಗ) ದಿನಾಂಕ:17.09.2021.

4.ಪ್ರಾಂಶುಪಾಲರ ಪತ್ರ ಸಂಖ್ಯೆ: ಸಪಾತೀ/ಸಿಬ್ಬಂದಿ/36/2023-24, ದಿನಾಂಕ:30.03.2023, 25.05.2023, 06.06.2023.

5. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ಸಲ್ಲಿಸಲಾಗಿದ್ದ ರಿಟ್ ಅರ್ಜಿ ಸಂಖ್ಯೆ:17713/2022(S RES)ರ ಆದೇಶ ದಿನಾಂಕ:09.02.2023.

6. ಸಿಸಿಸಿ NO 681/2024(CIVIL).

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-01ರ ಸರ್ಕಾರದ ಆದೇಶದಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವೃಂದದವರಿಗೆ 07ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯನ್ನು ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ಕಾಲ್ಪನಿಕ ಹಾಗೂ ದಿನಾಂಕ:01.04.2020 ರಿಂದ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಉಲ್ಲೇಖ-02ರ ಸರ್ಕಾರದ ಆದೇಶದಲ್ಲಿ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವೇತನಾನುದಾನಕ್ಕೊಳಪಟ್ಟು ಕಾರ್ಯ ನಿರ್ವಹಿಸುತ್ತಿರುವ ಬೋಧಕ ವೃಂದ ಸಿಬ್ಬಂದಿಗಳಿಗೆ 07ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯನ್ನು ಜಾರಿಗೊಳಿಸುವ ಸಂಬಂಧ "ತಾಂತ್ರಿಕ ಶಿಕ್ಷಣ ಇಲಾಖೆಯ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋದಕ ವೃಂದದ 830 ಸಿಬ್ಬಂದಿಗಳಿಗೆ ರಿಟ್ ಅಪೀಲ್ ಸಂಖ್ಯೆ:2476/2015 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡುವ ಅಂತೀಮ ತೀರ್ಪಿನ ಷರತ್ತಿಗೊಳಪಟ್ಟು ಪರಿಷ್ಕೃತ 07ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿ, ವೇತನವನ್ನು ನಿಗದಿಪಡಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ"

ಉಲ್ಲೇಖ-03ರ ಸರ್ಕಾರದ ಆದೇಶದಲ್ಲಿ 07 ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯ **PAY MATRICS** ತಿದ್ದುಪಡಿ ಮಾಡಿ ಆದೇಶಿಸಲಾಗಿದೆ.

ಉಲ್ಲೇಖ-04ರಲ್ಲಿ ಶ್ರೀ ಎಂ.ಡಿ.ಅಶೋಕ, ಆಯ್ಕೆ ಶ್ರೇಣಿ ಉಪನ್ಯಾಸಕರು ,ಸಿವಿಲ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಪರಿಷ್ಕೃತ 07ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿ, ವೇತನವನ್ನು ನಿಗದಿಪಡಿಸಲು ಅನುದಾನಿತ ಸಹ್ಯಾದ್ರಿ ಪಾಲಿಟೆಕ್ನಿಕ್ ತೀರ್ಥಹಳ್ಳಿ ಸಂಸ್ಥೆಯ ಪ್ರಾಂಶುಪಾಲರು ಪ್ರಸ್ತಾವನೆಯಲ್ಲಿ ಸದರಿಯವರಿಗೆ ರೂ.16,53,778/-ಗಳನ್ನು ಬಿಡುಗಡೆಗೊಳಿಸುವಂತೆ ಸಲ್ಲಿಸಿರುತ್ತಾರೆ.

ಉಲ್ಲೇಖ-(05)ರ ಮಾನ್ಯ ಕರ್ನಾಟಕ ಉಚ್ಚ-ನ್ಯಾಯಾಲಯ ಬೆಂಗಳೂರು, ದಿನಾಂಕ:09.02.2023 ರಂದು ನೀಡಿರುವ ಆದೇಶದಂತೆ ಪ್ರಸ್ತಾಪಿತರಿಗೆ 07ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿ, ವೇತನವನ್ನು ನಿಗದಿಪಡಿಸುವ ಸಂಬಂಧ ಉಲ್ಲೇಖ-(06) ರಲ್ಲಿನ ಈ ಕಛೇರಿ

ತಿದ್ದುಪಡಿ ಆದೇಶದಲ್ಲಿ 07ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿ, ವೇತನವನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಇಲಾಖಾ ಏಕ-ಕಡತ ಸಂಖ್ಯೆ-1485950 ರಲ್ಲಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಇಲಾಖಾ ಎಚ್.ಆರ್.ಎಂ.ಎಸ್. ವಿಭಾಗದಿಂದ ಕಡತ ಸಂಖ್ಯೆ:1485950 ರಲ್ಲಿ ರೂ.16,53,778/- ಗಳನ್ನು ಬಿಡುಗಡೆಗೊಳಿಸುವಂತೆ ತಿಳಿಸಿರುತ್ತಾರೆ.

2024-25 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ ಶ್ರೀ ಎಂ.ಡಿ.ಅಶೋಕ್, ಆಯ್ಕೆ ಶ್ರೇಣಿ ಉಪನ್ಯಾಸಕರು ಅನುದಾನಿತ ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ, ಇವರಿಗೆ 07 ನೇ ವೇತನದ ವ್ಯತ್ಯಾಸದ ಬಾಕಿ ಮೊತ್ತವನ್ನು (ಏಪ್ರಿಲ್-2020 ರಿಂದ ಜುಲೈ-2023) ಸರ್ಕಾರದ ಪಾಲಿನ ಶೇ.100 ರಷ್ಟು ವೇತನಾನುದಾನ **ರೂ.16,53,778/-**ಗಳನ್ನು 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**<u>ಕಛೇರಿ ಆದೇಶ ಸಂ: ಡಿಟಿಇ 02 ಜಿಆರ್‌ಟಿ (2) 2024, ಬೆಂಗಳೂರು, ದಿನಾಂಕ: 12-12-2024.</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಎಂ.ಡಿ.ಅಶೋಕ್, ಆಯ್ಕೆ ಶ್ರೇಣಿ ಉಪನ್ಯಾಸಕರು ಅನುದಾನಿತ ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ, ಇವರಿಗೆ 07 ನೇ ವೇತನದ ವ್ಯತ್ಯಾಸದ ಬಾಕಿ ಮೊತ್ತ (ಏಪ್ರಿಲ್-2020 ರಿಂದ ಜುಲೈ-2023) **ರೂ.16,53,778/-(ಹದಿನಾರು ಲಕ್ಷದ ಐವತ್ತ ಮೂರು ಸಾವಿರದ ಏಳು ನೂರು ಎಪ್ಪತ್ತ ಎಂಟು)**ಮಾತ್ರಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2024-25 ನೇ ಸಾಲಿನ ಆಯವ್ಯಯದ **ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ** ಭರಿಸಲು ಆದೇಶಿಸಲಾಗಿದೆ.

| Sl No | Name of the Polytechnic | Name of the Employee | HRMS Bill NO. | No. of employees | Amount | Recipient ID | Employee ID |
|---|---|---|---|---|---|---|---|
| 1 | SAHYADRI POLYTECHNIC, THIRTHAHALLI | M D ASHOK | HG2412084910 | 1 | 3,05,046 | 2600779073 | 100157008 |
| | | | HG2412085058 | 1 | 13,48,732 | | |
| | TOTAL | | | | 16,53,778 | | |

ಈಗ ಬಿಡುಗಡೆ ಮಾಡಿರುವ 07 ನೇ ವೇತನದ ವ್ಯತ್ಯಾಸದ ಬಾಕಿ ಮೊತ್ತ (ಏಪ್ರಿಲ್-2020 ರಿಂದ ಜುಲೈ-2023) ಸರ್ಕಾರದ ಪಾಲಿನ 100% ವೇತನಾನುದಾನ ಒಟ್ಟು ಮೊತ್ತ **ರೂ.16,53,778/- (ಹದಿನಾರು ಲಕ್ಷದ ಐವತ್ತ ಮೂರು ಸಾವಿರದ ಏಳು ನೂರು ಎಪ್ಪತ್ತ ಎಂಟು)**ಗಳನ್ನು ಸಿ.ಟಿ.ಎಸ್ 13 ಮೂಲಕ ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

**<u>ಷರತ್ತು ಮತ್ತು ನಿಬಂಧನೆಗಳು:-</u>**

1. ಸದರಿಯವರಿಗೆ ಹೆಚ್ಚುವರಿಯಾಗಿ ಪಾವತಿಸಲಾಗಿದಲ್ಲಿ ಸದರಿ ವ್ಯತ್ಯಾಸದ ಮೊತ್ತವನ್ನು ಸರ್ಕಾರಕ್ಕೆ ಮರು ಪಾವತಿಸಿ ಚಲನ್ ಸಲ್ಲಿಸಲು ಸಂಸ್ಥೆಯ ಪ್ರಾಂಶುಪಾಲರಿಗೆ ಸೂಚಿಸಿದೆ.
2. ಮಾನ್ಯ ಉಚ್ಛನ್ಯಾಯಲಯ, ಧಾರವಾಡ ಬೆಂಚ್‌ನ, ಧಾರವಾಡ (1) W.P No. 110254/2019 & 110271/2019 -ಶ್ರೀ. ಕಿಶೋರ್ರೇವಣಕರ್ ಮತ್ತು ಇತರರು ಆದೇಶ ದಿನಾಂಕ 04-06-2019 (2) W.P ಓಂ. 110242/2019 & 110243/2019 -ಶ್ರೀ. ಸಲೀಮ್ ಅಬ್ಬಿಗೇರಿ ಮತ್ತು ಇತರರ ಆದೇಶ ದಿನಾಂಕ 18-06-2019 (3) ಮಾನ್ಯ ಉಚ್ಛನ್ಯಾಯಾಲಯ, ಬೆಂಗಳೂರು W.P No. 18442-18484/2019- ಶ್ರೀ. ನಾಗರಾಜರಾವ್ ವೈ.ಕೆ ಮತ್ತು ಇತರರ ಆದೇಶ ದಿನಾಂಕ 25-04-2019 ಹಾಗೂ (4) W.P No. 19104-19303/2019 & 19705-19721/2019 ಉ್ರ ಆದೇಶ ದಿನಾಂಕ 26-04-2019 ರ ಮಧ್ಯಂತರ ಆದೇಶದನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
3. ಉಚ್ಛನ್ಯಾಯಲಯ, ಧಾರವಾಡ ಬೆಂಚ್‌ನ W.A No. 2476/2015; 2467/2015; 3600-4195/2015 c/wW.A No. 2467/2015 & 2714-3455/2015 ದಿನಾಂಕ 27-11-2015 ನ ತೀರ್ಪಿನನ್ವಯ ವೇತನವನ್ನು

ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.

4. ಮಾನ್ಯ ಉಚ್ಚನ್ಯಾಯಾಲಯ, ಧಾರವಾಡ ಪೀಠ W.P No. 109397/2019, 109626/2019, 110116-144/2019 ರ ಆದೇಶ ದಿನಾಂಕ 15-05-2019 ರಮಧ್ಯಂತರ ಆದೇಶದನ್ವಯ ಟಿಪ್ಪು ಶಾಹೀದ್ ಅನುದಾನಿತ ಪಾಲಿಟೆಕ್ನಿಕ್, ಹುಬ್ಬಳ್ಳಿ ಸಂಸ್ಥೆಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
5. ವೇತನ ಬಿಲ್ಲಿನಲ್ಲಿ ಆಯುಕ್ತರ ಅನುಮೋದನೆ ಪಡೆಯದೇ ವೇತನವಲ್ಲದೇ ಯಾವುದೇ ಮೊತ್ತವನ್ನು ಕ್ಲೇಮ್ ಮಾಡಬಾರದು, ಮಾಡಿದ್ದಲ್ಲಿ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
6. ಸರ್ಕಾರದಿಂದ ಅನುಮೋದನೆಗೊಂಡಿರುವ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವೇತನಾನುದಾನವನ್ನು ಪಡೆಯುವುದು.
7 ಯಾವುದೇ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದಲ್ಲಿ ಕೂಡಲೇ ಆಯುಕ್ತರ ಗಮನಕ್ಕೆ ತರುವುದು.
8. ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದುಕಂಡು ಬಂದಲ್ಲಿ ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
9. ಹೆಚ್.ಆರ್.ಎಂ.ಎಸ್ ಬಿಲ್ ಅನ್ನು ಪ್ರತಿ ತಿಂಗಳು 25 ನೇ ತಾರೀಖಿನೊಳಗೆ ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿಗೆ ತಪ್ಪದೇ ಕಳುಹಿಸುವುದು, ಬಿಲ್ ತಡವಾಗಿಸಲ್ಲಿಸಿ ವೇತನ ಬಿಡುಗಡೆ ಮಾಡಲು ತಡವಾದಲ್ಲಿ ಪ್ರಿನ್ಸಿಪಾಲರನ್ನೇ ಹೊಣೆ ಮಾಡಲಾಗುವುದು.
10. ಪ್ರತಿ ತಿಂಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸುವುದು. ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸದೇಇರುವ ಸಂಸ್ಥೆಗಳ ವೇತನವನ್ನು ತಾತ್ಕಾಲಿಕವಾಗಿ ತಡೆಹಿಡಿದಲ್ಲಿ ಪ್ರಿನ್ಸಿಪಾಲರುಗಳೇ ನೇರ ಹೊಣೆಗಾರರಾಗುತ್ತಾರೆ.
11. ಪ್ರತಿ ತಿಂಗಳು ಶಾಸನ ಬದ್ಧ ಕಟಾವುಗಳನ್ನು ಮಾಡಿ ಆಯಾ/ಸಂಬಂಧಪಟ್ಟ ಇಲಾಖೆಗಳಿಗೆ ತಪ್ಪದೆ ಕಡ್ಡಾಯವಾಗಿ ಕಳುಹಿಸಿ ಈ ಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.
12. ಪ್ರತಿ ಆರ್ಥಿಕ ವರ್ಷದಕೊನೆಯಲ್ಲಿ "Annual Accounts "ಅನ್ನು ಸಲ್ಲಿಸುವುದು.
13. ವಿದ್ಯಾರ್ಥಿ ಬೋಧನಾ ಶುಲ್ಕವನ್ನು ನಿಗಧಿತ ಸಮಯದಲ್ಲಿ ಪಾವತಿಸುವುದು.

**'ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1. ಆಯುಕ್ತಾಲಯದ ಬಿಎಲ್ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ(ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ಬಿಲ್ಸ್ ವಿಭಾಗಕ್ಕೆ (ಉ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.
5. ಕಾನೂನು ಘಟಕ.